**Code No. 18 Y**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ದ್ವಿತೀಯ ಪತ್ರಿಕೆ

## ವಿಸ್ತರಿಸುವಿಕೆ

ಜೂನ್, 2016

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಇವರು ತಮ್ಮ ಇಲಾಖೆಗೆ ಬೇಕಾಗಿರುವ ಮೂರು ಜೆರಾಕ್ಸ್ ಯಂತ್ರಗಳ
$\frac{1}{4}$ ಸರಬರಾಜಿಗಾಗಿ ಟೆಂಡರುಗಳನ್ನು/ ಕರೆದಿರುತ್ತಾರೆ. ಅರ್ಜಿಗಳನ್ನು ಆಯುಕ್ತರ ಕಛೇರಿಯಲ್ಲಿ ಎರಡು ಸಾವಿರದ ಹದಿನೈದರ ಆಗಸ್ಟ್ ಒಂದನೇ ತಾರೀಖಿನಿಂದ ವಿತರಿಸಲಾಗುವುದು. ಅರ್ಜಿ
$\frac{1}{2}$ ಶುಲ್ಕ ಎರಡು ಸಾವಿರ ರೂಪಾಯಿಗಳು./ ಭರ್ತಿ ಮಾಡಿದ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಆಗಸ್ಟ್ ಮೂವತ್ತೊಂದು ಐದು ಗಂಟೆ. ಸೆಪ್ಟೆಂಬರ್ ಎರಡರಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಹಾಜರಿರುವ
ಟೆಂಡರುದಾರರ/ ಸಮ್ಮುಖದಲ್ಲಿ ಟೆಂಡರುಗಳನ್ನು $\frac{3}{4}$
ತೆರೆಯಲಾಗುವುದು. ಠೇವಣಿ ಒಂದು ಲಕ್ಷ ರೂಪಾಯಿಗಳು.

ಮೇಲ್ಕಂಡ ಇಲಾಖೆಯ ಆಯುಕ್ತರ ಸಹಿಗಾಗಿ **ಟೆಂಡರು ಪ್ರಕಟಣೆ ಸಿದ್ಧಪಡಿಸಿ.**

(ಅಂಕಗಳು : 20)

[ Turn over

1 **ಪ್ರಶ್ನೆ ಎರಡು** :X ಕರ್ನಾಟಕ ಲೋಕಸೇವಾ
ಆಯೋಗ, ಉದ್ಯೋಗ ಸೌಧ, ಬೆಂಗಳೂರು, ಇದರ ಕಾರ್ಯದರ್ಶಿಯವರು ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ
$\frac{1}{4}$ ಹುದ್ದೆಗಳಿಗಾಗಿ/ ಅರ್ಜಿಗಳನ್ನು ಆಹ್ವಾನಿಸಿರುತ್ತಾರೆ.
ವಿದ್ಯಾರ್ಹತೆ : ಮೂರು ವರ್ಷಗಳ ಪದವಿಯನ್ನು ಪಡೆದಿರುವ ಭಾರತೀಯ ಪೌರತ್ವವನ್ನು ಹೊಂದಿರುವವರು ಆನ್‌ಲೈನ್
$\frac{1}{2}$ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು./
ವಯೋಮಿತಿ : ಕನಿಷ್ಠ ಹದಿನೆಂಟು ಮತ್ತು ಗರಿಷ್ಠ ಮೂವತ್ತೈದು ವರ್ಷ, ಮೀಸಲಾತಿ ವರ್ಗಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಎರಡು
$\frac{3}{4}$ ಸಾವಿರದ ಹದಿನೈದು/ ಮೇ ಮೂವತ್ತೊಂದು.
ಅರ್ಜಿಗಳು ಮೇಲ್ಕಂಡ ವಿಳಾಸಕ್ಕೆ ತಲುಪುವಂತೆ ಕಳುಹಿಸತಕ್ಕದ್ದು.

**ಜಾಹಿರಾತು ತಯಾರಿಸಿ.**

(ಅಂಕಗಳು : 20)

**ಪ್ರಶ್ನೆ ಮೂರು** *:* ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್. ವೃತ್ತ,
2 ಬೆಂಗಳೂರು,X ಇವರು ಕರ್ನಾಟಕ ಸರ್ಕಾರದ
ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಬರೆದ ಸರ್ಕಾರಿ ಪತ್ರ. ರಾಜ್ಯದಾದ್ಯಂತ
ಸೇವೆ ಸಲ್ಲಿಸುತ್ತಿರುವ/ ಪ್ರಾಥಮಿಕ ಶಾಲಾ $\frac{1}{4}$
ಶಿಕ್ಷಕರಿಗೆ ಪ್ರಸಕ್ತ ಸಾಲಿನಲ್ಲಿ ವರ್ಗಾವಣಾ ನೀತಿಯ ಕೆಲವು ನಿಯಮಗಳ ತಿದ್ದುಪಡಿಯನ್ನು ಪ್ರಸ್ತಾವನೆಯಲ್ಲಿ ಸೂಚಿಸಲಾಗಿರುತ್ತದೆ. ಸದರಿ
ತಿದ್ದುಪಡಿಗಳನ್ನು/ ಪರಿಶೀಲಿಸಿ ರಾಜ್ಯ ಸಚಿವ $\frac{1}{2}$
ಸಂಪುಟದ ಮುಂದೆ ಮಂಡಿಸಿ ಅನುಮೋದನೆಯನ್ನು ಪಡೆದು ಪ್ರಸಕ್ತ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ನೀತಿಯನ್ನು ರೂಪಿಸಿ ಕೌನ್ಸೆಲಿಂಗ್
ಮುಖಾಂತರ/ ವರ್ಗಾವಣೆಗೆ ಇಚ್ಛಿಸುವ ಮತ್ತು $\frac{3}{4}$
ಅರ್ಹರಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನುವು ಮಾಡಿಕೊಡಬೇಕೆಂದು ತಮ್ಮ ಆದೇಶಕ್ಕಾಗಿ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿರುತ್ತದೆ.

**ಸರ್ಕಾರಿ ಪತ್ರವನ್ನು ತಯಾರಿಸಿ.**X 3

(ಅಂಕಗಳು : 20)

**ಪ್ರಶ್ನೆ ನಾಲ್ಕು** *:* ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು, ದಿನಾಂಕ ಎರಡು ಸಾವಿರದ ಹದಿನೈದು ಮಾರ್ಚ್ ಇಪ್ಪತ್ತೆಂಟರಂದು ವಿಧಾನ ಸೌಧದ
ಬ್ಯಾಂಕ್ವೆಟ್ ಹಾಲ್‌ನಲ್ಲಿ ಅಂತರರಾಷ್ಟ್ರೀಯ/ $\frac{1}{4}$

ಮಹಿಳಾ ದಿನಾಚರಣೆಯನ್ನು ಅದ್ದೂರಿಯಾಗಿ
ಆಚರಿಸಿದರು. ಸಮಾರಂಭದಲ್ಲಿ ರಾಜ್ಯ ಸರ್ಕಾರದ
ಹಲವು ಇಲಾಖೆಗಳಲ್ಲಿ ಪ್ರಾಮಾಣಿಕವಾಗಿ ಮತ್ತು
$\frac{1}{2}$ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವ/ ಐವರು
ಮಹಿಳೆಯರನ್ನು ಸನ್ಮಾನಿಸಲಾಯಿತು. ಮಾನ್ಯ
ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು
ಸಮಾರಂಭದ ಉದ್ಘಾಟನೆಯನ್ನು ಮಾಡಿದರು.
ಉದ್ಘಾಟನಾ ಭಾಷಣವನ್ನು ಮಾಡುತ್ತಾ ರಾಜ್ಯ
$\frac{3}{4}$ ಸರ್ಕಾರಿ ನೌಕರರು/ ಅದರಲ್ಲೂ ವಿಶೇಷವಾಗಿ
ಮಹಿಳಾ ನೌಕರರನ್ನು ಅಭಿನಂದಿಸುತ್ತೇನೆ ಎಂದು
ಮುಖ್ಯಮಂತ್ರಿಯವರು ಹೇಳಿದರು.

ಕನ್ನಡಪ್ರಭ ಸಂಪಾದಕರಿಗೆ ತಮ್ಮ
ದಿನಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ
4 ಪ್ರಕಟಿಸುವಂತೆX ಕೋರಿ ಪತ್ರದೊಂದಿಗೆ
**ಪತ್ರಿಕಾ ಪ್ರಕಟಣೆಯನ್ನು ಸಿದ್ಧಪಡಿಸಿ.**

(ಅಂಕಗಳು : 20)

**ಪ್ರಶ್ನೆ ಐದು :** ಕರ್ನಾಟಕ ರಾಜ್ಯ ಸರ್ಕಾರವು
ಎರಡು ಸಾವಿರದ ಹದಿನೈದನೇ ಸಾಲಿನ
ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ
ಸಮಾರಂಭವನ್ನು/ ನವೆಂಬರ್ ಒಂದರಂದು $\frac{1}{4}$
ಸಂಜೆ ಆರು ಗಂಟೆಗೆ ಬೆಂಗಳೂರಿನ ಶ್ರೀ ರವೀಂದ್ರ
ಕಲಾಕ್ಷೇತ್ರದಲ್ಲಿ ಏರ್ಪಡಿಸಿರುತ್ತದೆ. ಸನ್ಮಾನ್ಯ
ಮುಖ್ಯಮಂತ್ರಿಯವರು ಎಲ್ಲ ಪ್ರಶಸ್ತಿ
ಪುರಸ್ಕೃತರನ್ನು ಸನ್ಮಾನಿಸಲಿದ್ದಾರೆ./ ಸಮಾರಂಭದ $\frac{1}{2}$
ಅಧ್ಯಕ್ಷತೆಯನ್ನು ರಾಜ್ಯ ಸರ್ಕಾರದ ಕನ್ನಡ
ಮತ್ತು ಸಂಸ್ಕೃತಿ ಇಲಾಖೆಯ ಸಚಿವರು
ವಹಿಸಲಿದ್ದಾರೆ. ಇಲಾಖೆಯ ಪ್ರಧಾನ
ಕಾರ್ಯದರ್ಶಿಯವರು ಮತ್ತು ಸ್ಥಳೀಯ
ಶಾಸಕರು/ ಮುಖ್ಯ ಅತಿಥಿಗಳಾಗಿ $\frac{3}{4}$
ಭಾಗವಹಿಸಲಿದ್ದಾರೆ.

ಮೇಲ್ಕಂಡ ಎಲ್ಲ ವಿಷಯಗಳನ್ನೊಳಗೊಂಡ
**ಆಹ್ವಾನ ಪತ್ರಿಕೆಯನ್ನು ಕನ್ನಡ ಮತ್ತು ಸಂಸ್ಕೃತಿ
ಇಲಾಖೆಯ ನಿರ್ದೇಶಕರಿಂದ ಹೊರಡಿಸಿದಂತೆ
ತಯಾರಿಸಿ.**X (ಅಂಕಗಳು : 20) 5